ರೈತರ ಸಾಲಮನ್ನಾ ಕುರಿತು

1427 (1762) - ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಲೆಕ್ಕ ಶೀರ್ಷಿಕೆ 2425-ಸಹಕಾರ-107-ಸಾಲ ನೀಡುವಿಕೆ ಸಹಕಾರಿ ಸಂಸ್ಥೆಗಳಿಗೆ ಸಹಾಯ-28-ಎಲ್ಲಾ ಸಾಲಗಳನ್ನು ಹಾಗೂ ಸಾಲದ ಕಂತುಗಳನ್ನು ಮರು ಪಾವತಿಸುವ ರೈತರಿಗೆ ಬಡ್ಡಿ ಸಹಾಯ-106-ಸಹಾಯಧನ ಅಡಿಯಲ್ಲಿ ರೈತರು ಪಡೆದ ಸಾಲದ ಕಂತುಗಳನ್ನು ಮರುಪಾವತಿಸುವವರಿಗೆ ಸಾಲ ಮನ್ನಾ ಸಬ್ಸಿಡಿ ಯೋಜನೆಯಡಿಯಲ್ಲಿ ಚಿಕ್ಕಮಂಗಳೂರು ಜಿಲ್ಲೆಗೆ ಎಷ್ಟು ಹಣ ಬಿಡುಗಡೆಗೊಳಿಸಲಾಗಿದೆ.

2. ಈ ಮೇಲ್ಕಂಡ ಆಯವ್ಯಯದ ಅಡಿಯಲ್ಲಿ ಎಷ್ಟು ರೈತಾಪಿ ಜನಗಳಿಗೆ ಸಹಾಯಧನ ನೀಡಲಾಗಿದೆ?

ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) :

1. ಲೆಕ್ಕ ಶೀರ್ಷಿಕೆ- "2425-ಸಹಕಾರ-107-ಸಾಲ ನೀಡಿಕೆ ಸಹಕಾರಿ ಸಂಸ್ಥೆಗಳಿಗೆ ಸಹಾಯ-2-ಸಾಮಾನ್ಯ-28-ಪಿಎಸಿ ಮತ್ತು ಪಿಸಿಎ ಆರ್ ಡಿ ಬ್ಯಾಂಕುಗಳಿಗೆ ಎಸ್.ಟಿ.ಎಂ.ಟಿ. (ಪರಿವರ್ತಿತ) ಮತ್ತು ಎಲ್.ಟಿ.ಸಾಲಗಳನ್ನು ಹಾಗೂ ಸಾಲದ ಕಂತುಗಳನ್ನು ಮರುಪಾತಿಸುವ ರೈತರಿಗೆ ಬಡ್ಡಿ ಸಹಾಯಧನ -106-ಸಹಾಯಧನ (ಯೋಜನೇತರ) 2425-00-107-2-28) ಅಡಿಯಲ್ಲಿ 1995 ಯೋಜನೆ ಅಡಿಯಲ್ಲಿ ಚಿಕ್ಕಮಂಗಳೂರು ಜಿಲ್ಲೆಗೆ ಬಿಡುಗಡೆಯಾಗಿರುವ ಒಟ್ಟು ಬಡ್ಡಿ ಸಹಾಯಧನದ ಮೊಬಲಗು ರೂ. 290.98 ಲಕ್ಷಗಳು."

2. ಚಿಕ್ಕಮಂಗಳೂರು ಜಿಲ್ಲೆಯಲ್ಲಿನ 20825 ರೈತರಿಗೆ ಸಹಾಯಧನ ನೀಡಲಾಗಿದೆ.

ದೊಡ್ಡಬಳ್ಳಾಪುರ ತಾಲೂಕ್ಲಿನಲ್ಲಿ ಸ್ವಸಹಾಯ ಗುಂಪುಗಳು

1428 (1709) - ಶ್ರೀ ಕೃಷ್ಣಪ್ಪ (ದೊಡ್ಡಬಳ್ಳಾಪುರ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಈವರೆಗೆ ಎಷ್ಟು ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ. ರಚಿಸಲಾಗಿರುವ ಗುಂಪುಗಳು ಬ್ಯಾಂಕುಗಳಲ್ಲಿ ಎಷ್ಟು ಠೇವಣಿ ಹಣವನ್ನು ಸಂಗ್ರಹಿಸಿದೆ?

ಆ) ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಎಷ್ಟು ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದೆ, ಎಷ್ಟು ಹಣವನ್ನು ಬ್ಯಾಂಕುಗಳಲ್ಲಿ ಠೇವಣಿ ಮಾಡಲಾಗಿದೆ.

ಇ) ಠೇವಣಿ ಮಾಡಿರುವ ಎಲ್ಲಾ ಗುಂಪುಗಳಿಗೆ ಬ್ಯಾಂಕುಗಳಿಂದ ಯಾವ ಯಾವ ಉದ್ದೇಶಗಳಿಗೆ ಸಾಲ ಸೌಲಭ್ಯ ನೀಡಲಾಗಿದೆ. ಇದರಲ್ಲಿ ಸರ್ಕಾರದಿಂದ ಕೊಟ್ಟಿರುವ ರಿಯಾಯಿತಿ ಹಣವೆಷ್ಟು? (ವಿವರ ನೀಡುವುದು)